"ಮಧುರ ಮಕ್ಕಳೇ- ಜ್ಞಾನರತ್ನಗಳ ವ್ಯವಹಾರ ಮಾಡಿ, ನೀವು ಜ್ಞಾನದಿಂದ ಒಬ್ಬರು ಇನ್ನೊಬ್ಬರ ಪಾಲನೆ ಮಾಡಬೇಕಾಗಿದೆ, ಪರಸ್ಪರ ಬಹಳ ಬಹಳ ಪ್ರೀತಿಯಿಂದ ಇರಬೇಕಾಗಿದೆ"

ಪ್ರಶ್ನೆ: ಕಾಯಿಲೆ ಅಥವಾ ಕರ್ಮಭೋಗವಿದ್ದರೂ ಸಹ ಯಾವ ಆಧಾರದ ಮೇಲೆ ಖುಷಿಯಾಗಿರಲು ಸಾಧ್ಯ?

ಉತ್ತರ: ವಿಚಾರ ಸಾಗರ ಮಂಥನ ಮಾಡುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಯಾವುದೇ ಕರ್ಮಭೋಗ ಅಥವಾ ಖಾಯಿಲೆ ಬಂದರೆ ತಮ್ಮೊಂದಿಗೆ ತಾವೇ ಮಾತನಾಡಿಕೊಳ್ಳಿ- ಈಗ ನಾವು 84 ಜನ್ಮಗಳ ಪಾತ್ರವನ್ನು ಪೂರ್ಣ ಮಾಡಿದೆವು, ಇದು ಹಳೆಯ ಪಾದರಕ್ಷೆಯಾಗಿದೆ. ಈ ಹಳೆಯ ಲೆಕ್ಕಾಚಾರವನ್ನು ಸಮಾಪ್ತಿ ಮಾಡಬೇಕಾಗಿದೆ ನಂತರ ನಾವು 21 ಜನ್ಮಗಳಿಗಾಗಿ ಎಲ್ಲಾ ಖಾಯಿಲೆಗಳಿಂದ ಮುಕ್ತರಾಗಿಬಿಡುತ್ತೇವೆ. ಯಾವುದೇ ಖಾಯಿಲೆಯು ಬಿಟ್ಟುಹೋಗುತ್ತದೆಯೆಂದರೆ ಖುಷಿಯಾಗುತ್ತದೆಯಲ್ಲವೆ.

ಗೀತೆ: ಮಾತಾ ಓ ಮಾತಾ............

ಓಂ ಶಾಂತಿ. ವಂದೇಮಾತರಂ- ಇದು ಮಾತೆಯರ ಮಹಿಮೆಯಾಗಿದೆ. ಹೇ ಮಾತಾ ನೀವು ಶಿವತಂದೆಯ ಭಂಡಾರದಿಂದ ಎಲ್ಲರ ಪಾಲನೆಯನ್ನು ಮಾಡುತ್ತೀರಿ. ನಿಮಗೆ ಶಿವತಂದೆಯ ಭಂಡಾರದಿಂದ ಜ್ಞಾನರತ್ನಗಳ ಖಜಾನೆಯು ಸಿಗುತ್ತಿದೆ ಅಥವಾ ಜ್ಞಾನಾಮೃತದ ಕಳಸದಿಂದ ನಿಮ್ಮ ಪಾಲನೆಯಾಗುತ್ತದೆ. ವಾಸ್ತವದಲ್ಲಿ ಮಹಿಮೆಯು ಶಿವತಂದೆಯದಾಗಿದೆ, ಅವರು ಮಾಡಿ-ಮಾಡಿಸುವವರಾಗಿದ್ದಾರೆ. ಮಾತೆಯು ಜಗದಂಬಾ ಆಗಿದ್ದಾರೆ. ಅವಶ್ಯವಾಗಿ ಅನ್ಯ ಮಾತೆಯರೂ ಇರಬಹುದು, ಇದು ಈ ಮಾತೆಯರ ಮಹಿಮೆಯಾಗಿದೆ. ತಾಯಿಯು ತುಂಬಾ-ತುಂಬಾ ಒಳ್ಳೆಯ ಪಾಲನೆ ಮಾಡುತ್ತಾರೆ. ಯಾರು ಶಿವತಂದೆಯ ಯಜ್ಞದಲ್ಲಿದ್ದಾರೆಯೋ ಅವರದು ಸ್ಥೂಲದಲ್ಲಿಯೂ ಪಾಲನೆಯಾಗುತ್ತದೆ ಹಾಗೂ ಅವಿನಾಶಿ ಜ್ಞಾನರತ್ನಗಳಿಂದಲೂ ಎಲ್ಲರ ಪಾಲನೆಯಾಗುತ್ತದೆ. ಪಾಲನೆ ಮಾಡುವವರು ಮೆಜಾರಿಟಿ ಮಾತೆಯರಾಗಿದ್ದಾರೆ. ಕೆಲವೊಮ್ಮೆ ಸಹೋದರರೂ ಸಹ ಸಹೋದರಿಯರ ಪಾಲನೆ ಮಾಡುತ್ತಾರೆ. ಕೇವಲ ಸಹೋದರಿಯು ಸಹೋದರನ ಪಾಲನೆ ಮಾಡುತ್ತಾರೆಂದಲ್ಲ, ಇಬ್ಬರೂ ಜ್ಞಾನರತ್ನಗಳ ವ್ಯವಹಾರದಿಂದ ಸಹೋದರನು ಸಹೋದರಿಯ ಹಾಗೂ ಸಹೋದರಿಯು ಸಹೋದರನ ಒಬ್ಬರು ಇನ್ನೊಬ್ಬರ ಪಾಲನೆ ಮಾಡುತ್ತಾರೆ. ತಾವು ಮಕ್ಕಳು ಬಹಳ ಪ್ರೀತಿಯಿಂದ ಇರಬೇಕಾಗುತ್ತದೆ. ಈ ಪ್ರಪಂಚದಲ್ಲಂತೂ ಒಬ್ಬರು ಇನ್ನೊಬ್ಬರಿಗೆ ವಿಕಾರವನ್ನೇ ಕೊಡುತ್ತಾರೆ ಆದ್ದರಿಂದ ಹೇಗೆ ಒಬ್ಬರು ಇನ್ನೊಬ್ಬರ ಶತ್ರುಗಳಾದರು ಆದರೆ ಇಲ್ಲಿ ಅವಿನಾಶಿ ಜ್ಞಾನರತ್ನಗಳ ಖಜಾನೆಯನ್ನು ಕೊಡುತ್ತಾರೆ. ಮನುಷ್ಯರಂತೂ ಕಲ್ಲುಗಳನ್ನೇ ಹೊಡೆಯುತ್ತಾರೆ ಏಕೆಂದರೆ ಕಲ್ಲುಬುದ್ಧಿಯವರಾಗಿದ್ದಾರೆ. ಸ್ಥೂಲವಾಗಿ ಕಲ್ಲುಗಳನ್ನು ಹೊಡೆಯುತ್ತಾರೆಂದಲ್ಲ. ಅಂತಹ ಮಾತುಗಳನ್ನು ಮಾತನಾಡುತ್ತಾರೆ ಎನ್ನುವ ತಿಳುವಳಿಕೆಇದೆ. ನೀವು ಸಹೋದರ-ಸಹೋದರಿಯರು, ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೀರಿ. ನಿಮ್ಮ ಹೆಸರೂ ಸಹ ತುಂಬಾ ದೊಡ್ಡದಿದೆ. ಬ್ರಹ್ಮಾಕುಮಾರಿಯರಿದ್ದಾರೆಂದರೆ ಕುಮಾರರೂ ಸಹ ಅವಶ್ಯವಾಗಿ ಇದ್ದಾರೆ. ಪ್ರಜಾಪಿತ ಬ್ರಹ್ಮಾ ಇರುವರೆಂದರೆ ಅವಶ್ಯವಾಗಿ ಬ್ರಾಹ್ಮಣ-ಬ್ರಾಹ್ಮಣಿಯರು ಇರುವರು. ಬೋರ್ಡನ್ನು ಓದಿ ಗಾಬರಿಯಾಗಬಾರದು. ಪ್ರಜಾಪಿತ ಬ್ರಹ್ಮನ ಮಕ್ಕಳು ಅವಶ್ಯವಾಗಿ ಬ್ರಹ್ಮಾಕುಮಾರ-ಕುಮಾರಿಯಾಗಿರುವರು. ಇಲ್ಲಿ ಬುದ್ಧಿಯಿಂದ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ.

ಗೀತೆಯಲ್ಲಿ ತಾಯಿಯ ಮಹಿಮೆಯಿದೆ. ಜಗದಂಬಾ ಸರಸ್ವತಿ ಎಂದು ಹೇಳಿದರೂ ಸಹ ಅವಶ್ಯವಾಗಿ ಎಲ್ಲರೂ ಮಕ್ಕಳಾಗುತ್ತೇವೆ ಮತ್ತು ಇದು ಪರಿವಾರವಾಗುತ್ತದೆ. ಇದೂ ಸಹ ತಿಳಿದುಕೊಳ್ಳುವ ಮಾತಲ್ಲವೆ. ಪ್ರಜಾಪಿತ ಬ್ರಹ್ಮಾ ಎಂದು ಬರೆಯಲ್ಪಟ್ಟಿದೆ. ಬ್ರಹ್ಮನನ್ನು ಪ್ರಜಾಪಿತನೆಂದು ಹೇಳಲಾಗುತ್ತದೆ. ಇವರು ಸಾಕಾರಿ ಸೃಷ್ಟಿಯ ಪಿತನಾಗಿದ್ದಾರೆ. ಪ್ರಜಾಪಿತ ಬ್ರಹ್ಮನ ಮುಖಾಂತರ ಬ್ರಾಹ್ಮಣಕುಲದ ರಚನೆಯಾಯಿತು ಎಂದು ಗಾಯನವೂ ಇದೆ. ಆದಿಸನಾತನ ಮೊಟ್ಟಮೊದಲು ಬ್ರಾಹ್ಮಣರಾಗಿಬಿಡುತ್ತಾರೆ. ವಾಸ್ತವದಲ್ಲಿ ಆದಿಸನಾತನ ದೇವಿ-ದೇವತಾ ಧರ್ಮ ಎನ್ನುವುದು ತಪ್ಪಾಗಿದೆ. ಅದಂತೂ ಸತ್ಯಯುಗದ ಧರ್ಮವಾಗಿದೆ. ಆದಿಸನಾತನ ಬ್ರಾಹ್ಮಣರ ಧರ್ಮ ಯಾವುದಿದೆ ಅದು ಪ್ರಾಯಃಲೋಪವಾಗಿಬಿಟ್ಟಿದೆ. ಪರಮಪಿತ ಪರಮಾತ್ಮನು ಪ್ರಜಾಪಿತ ಬ್ರಹ್ಮಾರವರ ಮುಖಾಂತರ ಬ್ರಾಹ್ಮಣ ಧರ್ಮವನ್ನು ರಚಿಸುತ್ತಾರೆ ಅಂದಾಗ ಈ ಸಂಗಮಯುಗವು ದೇವಿ-ದೇವತಾ ಧರ್ಮಕ್ಕಿಂತಲೂ ಶ್ರೇಷ್ಠವಾಗಿದೆ. ಮೊದಲು ಈ ಬ್ರಾಹ್ಮಣ ಧರ್ಮವಾಗಿದೆ, ಇದನ್ನು ಶಿಖೆಯೆಂತಲೂ ಹೇಳಲಾಗುತ್ತದೆ. ಇದನ್ನೇ ಸಂಗಮಯುಗಿ ಆದಿಸನಾತನ ಬ್ರಾಹ್ಮಣಧರ್ಮವೆಂದು ಹೇಳಲಾಗುವುದು. ತಿಳಿದುಕೊಳ್ಳಲು ಎಷ್ಟು ಒಳ್ಳೆಯ ರಹಸ್ಯವಿದೆ. ತಂದೆಯು ತಿಳಿಸುತ್ತಾರೆ- ಮೊದಲು ಯಾರೇ ಬರುತ್ತಾರೆಂದರೆ ಅವರಿಗೆ ತಂದೆಯ ಪರಿಚಯ ನೀಡಿ- ಇದು ಮುಖ್ಯವಾಗಿದೆ. ಬ್ರಾಹ್ಮಣರಿಗಂತೂ ರಾಜಧಾನಿಯಿಲ್ಲ. ಸತ್ಯಯುಗೀ ದೈವೀ ಸಾಮ್ರಾಜ್ಯವು ನಿಮ್ಮ ಈಶ್ವರೀಯ ಜನ್ಮಸಿದ್ಧ ಅಧಿಕಾರವೆಂದು ಬರೆಯಲಾಗುತ್ತದೆ. ದೇವಿ-ದೇವತಾ ಧರ್ಮವಂತೂ ಅವಶ್ಯವಾಗಿ ಇದೆ ಆದರೆ ಅವರಿಗೆ ಈ ರಾಜಧಾನಿಯು ಯಾವಾಗ ಮತ್ತು ಹೇಗೆ ಸಿಗುತ್ತದೆ ಎಂಬುದನ್ನೂ ಸಹ ತಿಳಿಸಬೇಕಾಗುತ್ತದೆ ಆದ್ದರಿಂದ ತ್ರಿಮೂರ್ತಿಯ ಚಿತ್ರವನ್ನು ಅವಶ್ಯವಾಗಿ

ಮುಂದಿಟ್ಟುಕೊಳ್ಳಬೇಕಾಗಿದೆ. ಇದರಲ್ಲಿ ಸ್ವರ್ಗದ ರಾಜ್ಯಭಾಗ್ಯವು ನಿಮ್ಮ ಜನ್ಮಸಿದ್ಧ ಅಧಿಕಾರವಾಗಿದೆ ಎಂದು ಬರೆಯಲ್ಪಟ್ಟಿದೆ ಅಂದಾಗ ಯಾರ ಮುಖಾಂತರ? ಇದನ್ನೂ ಸಹ ಬರೆಯಬೇಕು. ಈ ಬೋರ್ಡನ್ನು ಮಾಡಿಸಿ ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ಹಾಕಿಸಿಕೊಳ್ಳಬೇಕು. ಹೇಗೆ ಸರ್ಕಾರದ ಅಧಿಕಾರಿಗಳ ಬೋರ್ಡ್ ಇರುತ್ತದೆಯಲ್ಲವೆ, ಕೆಲವರ ಬಳಿ ಬ್ಯಾಡ್ಜ್ ಇರುತ್ತದೆ. ಎಲ್ಲರಿಗೂ ತಮ್ಮ-ತಮ್ಮ ಗುರುತು ಇರುತ್ತದೆ ಹಾಗೆಯೇ ನಿಮ್ಮದೂ ಸಹ ಗುರುತಿರಬೇಕು. ತಂದೆಯಂತೂ ಸಲಹೆಯನ್ನು ಕೊಡುತ್ತಾರೆ ಅದನ್ನು ಕಾರ್ಯದಲ್ಲಿ ತರುವುದು ಮಕ್ಕಳ ಕೆಲಸವಲ್ಲವೆ. ವಿಹಂಗ ಮಾರ್ಗದ ಸೇವೆ ಮಾಡಬೇಕಾಗಿದೆ. ಇದು ಬಹಳ ಮುಖ್ಯ ವಸ್ತುವಾಗಿದೆ. ಹೇಗೆ ಡಾಕ್ಟರ್, ಬ್ಯಾರಿಸ್ಟರ್ ಮುಂತಾದವರೆಲ್ಲರ ಮನೆಯಲ್ಲಿ ಬೋರ್ಡ್ ಹಾಕಲಾಗಿರುತ್ತದೆಯಲ್ಲವೆ. ಹಾಗೆಯೇ ನಿಮ್ಮದೂ ಸಹ ಬೋರ್ಡ್ ಹಾಕಿರಬೇಕು- ಶಿವತಂದೆಯಿಂದ ಬ್ರಹ್ಮಾರವರ ಮುಖಾಂತರ ಸ್ವರ್ಗದ ರಾಜ್ಯಭಾಗ್ಯವು ಹೇಗೆ ಸಿಗುತ್ತದೆ ಎಂಬುದನ್ನು ಬಂದು ತಿಳಿದುಕೊಳ್ಳಿ. ತಂದೆಯು ಸಲಹೆ ಕೊಡುತ್ತಾರೆ, ಮನುಷ್ಯರು ನೋಡಿ ಆಶ್ಚರ್ಯಚಕಿತರಾಗುತ್ತಾರೆ. ತಿಳಿದುಕೊಳ್ಳಲು ಒಳಗೆ ಬರುತ್ತಾರೆ. ನಿಮ್ಮ ಜಮೀನಿನ ಜಾಗದಲ್ಲಿಯೂ ಬೋರ್ಡ್ ಹಾಕಬಹುದು. ಯಾರದು ಯಾವ ವ್ಯವಹಾರವಿದೆಯೋ ಅಲ್ಲಿ ಬೋರ್ಡನ್ನು ಹಾಕಬೇಕು. ಒಬ್ಬರು ಇನ್ನೊಬ್ಬರಿಂದ ಕಲಿಯಬೇಕು ಆದರೆ ಮಕ್ಕಳ ಮೇಲೆ ಮಾಯೆಯ ಯುದ್ಧವು ಬಹಳ ಆಗುತ್ತದೆ. ನಾವು ತಂದೆಯ ಬಳಿ ಹೋಗುತ್ತೇವೆ. 84 ಜನ್ಮಗಳ ಪಾತ್ರವು ಪೂರ್ಣವಾಯಿತು ನಂತರ ಹೊಸಪ್ರಪಂಚ, ಸ್ವರ್ಗದಲ್ಲಿ ಬಂದು ಆಸ್ತಿಯನ್ನು ಪಡೆಯುತ್ತೇವೆ ಎನ್ನುವ ನಿಶ್ಚಯವಿಲ್ಲ. ಇದು ನೆನಪಿರುವುದೇ ಇಲ್ಲ. ತಂದೆಯು ತಿಳಿಸುತ್ತಾರೆ- ಭಲೆ, ಕರ್ಮ ಮಾಡಿ ನಂತರ ಬಿಡುವು ಸಿಕ್ಕಿದಾಗ ಆ ಸಮಯದಲ್ಲಿ ತಂದೆಯನ್ನು ನೆನಪು ಮಾಡಿ. ಇದು ಎಲ್ಲರ ಅಂತಿಮಜನ್ಮವಾಗಿದೆ. ಇದೇ ಮೃತ್ಯುಲೋಕವೆಂದು ಪುನಃ ಪುನರ್ಜನ್ಮವನ್ನು ಇಲ್ಲಿ ತೆಗೆದುಕೊಳ್ಳಬಾರದು ಎಂದು ಡಂಗುರ ಸಾರಿ. ನಿಮಗೂ ಸಹ ಗೊತ್ತಿದೆ- ಮೃತ್ಯುಲೋಕವು ಈಗ ಸಮಾಪ್ತಿಯಾಗಲಿದೆ. ಮೊದಲು ನಿರ್ವಾಣಧಾಮಕ್ಕೆ ಹೋಗಬೇಕಾಗಿದೆ. ಹೀಗೆ ತಮ್ಮೊಂದಿಗೆ ತಾವು ಮಾತನಾಡಿಕೊಳ್ಳಬೇಕು. ಇದಕ್ಕೆ ವಿಚಾರಸಾಗರ ಮಂಥನವೆಂದು ಕರೆಯಲಾಗುತ್ತದೆ. ತಂದೆಯು ತಿಳಿಸುತ್ತಾರೆ- ನೀವು ಕರ್ಮಯೋಗಿಗಳಾಗಿದ್ದೀರಿ ಅಂದಮೇಲೆ ನಿಮಗೆ ಆಮೆ, ಪ್ರಾಣಿಗಳಷ್ಟೂ ಸಹ ಬುದ್ಧಿಯಿಲ್ಲವೆ! ಆ ಪ್ರಾಣಿಗಳು ಶರೀರ ನಿರ್ವಹಣೆಗಾಗಿ ಹುಲ್ಲು ಇತ್ಯಾದಿಯನ್ನು ತಿಂದು ನಂತರ ಕರ್ಮೇಂದ್ರಿಯಗಳನ್ನು ಸಂಕುಚಿತಗೊಳಿಸಿ ಶಾಂತರಾಗಿ ಕುಳಿತುಬಿಡುತ್ತವೆ. ನೀವು ಮಕ್ಕಳಂತೂ ತಂದೆಯ ನೆನಪಿನಲ್ಲಿರಬೇಕಾಗಿದೆ. ಸ್ವದರ್ಶನಚಕ್ರವನ್ನು ತಿರುಗಿಸಬೇಕಾಗಿದೆ, ತಮ್ಮನ್ನು ಮಾ||ಬೀಜರೂಪನೆಂದು ತಿಳಿಯಬೇಕಾಗಿದೆ. ಬೀಜದಲ್ಲಿ ಅದರ ಉತ್ಪತ್ತಿ ಹಾಗೂ ಪಾಲನೆ ಹೇಗಾಗುತ್ತದೆ ಎಂಬ ವೃಕ್ಷದ ಇಡೀ ಜ್ಞಾನವಿದೆ. ನಾಟಕದಲ್ಲಿ 84 ಜನ್ಮಗಳ ಚಕ್ರವು ಹೇಗೆ ಸುತ್ತುತ್ತದೆ? 84ರ ಚಕ್ರಕ್ಕಾಗಿ ಈ ಸೃಷ್ಟಿಚಕ್ರದ ಚಿತ್ರವನ್ನು ಮಾಡಲಾಗುತ್ತದೆ. ಆತ್ಮವು 84 ಲಕ್ಷ ಯೋನಿಗಳಲ್ಲಿ ಹೋಗುತ್ತದೆ ಎಂದು ಮನುಷ್ಯರು ತಿಳಿಯುತ್ತಾರೆ ಆದರೆ ನಿಮಗೆ ತಂದೆಯು ತಿಳಿಸಿದ್ದಾರೆ- ನೀವು ಕೇವಲ 84 ಜನ್ಮಗಳನ್ನು ಪಡೆಯುತ್ತೀರಿ. ಯಾರು ಆದಿಸನಾತನ ದೇವಿ-ದೇವತಾ ಧರ್ಮದವರಿದ್ದೀರಿ ಅರ್ಥಾತ್ ಯಾರು ಬ್ರಾಹ್ಮಣರಿಂದ ದೇವತೆಗಳಾಗುತ್ತೀರಿ ಅವರದೇ 84 ಜನ್ಮಗಳಿರುತ್ತವೆ. ನೀವು 84 ಜನ್ಮಗಳನ್ನು ಅರಿತುಕೊಂಡಿದ್ದೀರಿ. ಬ್ರಹ್ಮನ ರಾತ್ರಿ ಮತ್ತು ಬ್ರಹ್ಮನ ದಿನವೆಂದು ಹೇಳುತ್ತಾರೆ, ಇದರಲ್ಲಿ 84 ಜನ್ಮಗಳು ಬಂದುಬಿಡುತ್ತವೆ. ತ್ರಿಮೂರ್ತಿಯ ಬೋರ್ಡನ್ನು ಮಾಡಿಸಿ ಬರೆಯಬೇಕು- ಇದು ಈಶ್ವರೀಯ ಜನ್ಮಸಿದ್ಧ ಅಧಿಕಾರವಾಗಿದೆ, ಪಡೆಯುವುದಿದ್ದರೆ ಪಡೆದುಕೊಳ್ಳಿ. ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ (ನೌ ಆರ್ ನೆವರ್) ಈಗ ಆಗಲಿರುವ ಮಹಾಭಾರತ ಯುದ್ಧಕ್ಕೆ ಮೊದಲು ಪುರುಷಾರ್ಥ ಮಾಡಬೇಕಾಗಿದೆ.

ರಾಮ(ಶಿವತಂದೆ) ಏನನ್ನು ಕೊಡುತ್ತಾರೆ ಮತ್ತು ರಾವಣನು ಏನನ್ನು ಕೊಡುತ್ತಾನೆ? ಇದು ನಿಮಗೆ ಗೊತ್ತಿದೆ. ಅರ್ಧಕಲ್ಪ ರಾಮರಾಜ್ಯ, ಅರ್ಧಕಲ್ಪ ರಾವಣರಾಜ್ಯವಾಗಿದೆ. ಪರಮಾತ್ಮನೇ ದುಃಖವನ್ನು ಕೊಡುತ್ತಾರೆಂದಲ್ಲ. ದುಃಖವನ್ನು ಕೊಡುವವರು ರಾವಣ, ಪಂಚವಿಕಾರಗಳಾಗಿವೆ. ಇವೇ ವಿಕಾರಿಗಳನ್ನಾಗಿ ಮಾಡುತ್ತವೆ. ಮಕ್ಕಳಿಗೆ ಭಿನ್ನ-ಭಿನ್ನ ಪ್ರಕಾರದ ತಿಳುವಳಿಕೆಯು ಪ್ರತಿನಿತ್ಯವು ಸಿಗುತ್ತದೆಯೆಂದರೆ ಖುಷಿಯಲ್ಲಿರಬೇಕಲ್ಲವೆ. ನಿಮಗೆ ಗೊತ್ತಿದೆ- ಶಿವತಂದೆಯು ಪ್ರತಿನಿತ್ಯವೂ ಓದಿಸುತ್ತಿರುತ್ತಾರೆ. ಸಾಕಾರ(ಬ್ರಹ್ಮ) ನನ್ನು ನೆನಪು ಮಾಡಬೇಕಾಗಿಲ್ಲ. ಶಿವತಂದೆಯು ನಮಗೆ ಬ್ರಹ್ಮಾರವರ ಮುಖಾಂತರ ಸಹಜ ರಾಜಯೋಗವನ್ನು ಕಲಿಸುತ್ತಾರೆ. ಶಿವತಂದೆಯು ಪ್ರಜಾಪಿತ ಬ್ರಹ್ಮಾರವರಲ್ಲಿಯೇ ಬರುತ್ತಾರೆ. ಪ್ರಜಾಪಿತ ಬ್ರಹ್ಮನೆಂದು ಮತ್ತ್ಯಾರಿಗೂ ಹೇಳಲು ಸಾಧ್ಯವಿಲ್ಲ. ಬ್ರಾಹ್ಮಣರೂ ಸಹ ಅವಶ್ಯವಾಗಿ ಬೇಕು. ಸೆಕೆಂಡಿನಲ್ಲಿ ಮುಕ್ತಿ-ಜೀವನ್ಮುಕ್ತಿಯ ಆಸ್ತಿ ಅಥವಾ ರಾಜ್ಯಭಾಗ್ಯವನ್ನು ಪಡೆಯಿರಿ ಎಂದು ಗಾಯನ ಮಾಡಲಾಗುತ್ತದೆ. ಮಕ್ಕಳು ಹೇಳುತ್ತಾರೆ- ನಾವು ಶಿವತಂದೆಯ ಮಕ್ಕಳಾಗಿದ್ದೇವೆ, ಅವರೇ ಸ್ವರ್ಗದ ರಚಯಿತನಾಗಿದ್ದಾರೆ ಅಂದಮೇಲೆ ಅವಶ್ಯವಾಗಿ ನಮಗೂ ಸಹ ಸ್ವರ್ಗದ ರಾಜ್ಯಭಾಗ್ಯವನ್ನು ಕೊಡುತ್ತಾರೆ. ಎಂತಹ ವಿಚಿತ್ರ ತಂದೆಯಾಗಿದ್ದಾರೆ! ಒಂದು ಸೆಕೆಂಡಿನಲ್ಲಿ ಜನಕನಿಗೆ ಜೀವನ್ಮುಕ್ತಿ ಸಿಕ್ಕಿತು ಎನ್ನುವ ಗಾಯನವೂ ಇದೆ. ನಿಮಗೆ ಗೊತ್ತಿದೆ, ಈಗ ನಾವು ಶಿವತಂದೆಯ ಮಕ್ಕಳಾಗಿದ್ದೇವೆ ಅಂದಾಗ ಅವಶ್ಯವಾಗಿ ತಂದೆಯನ್ನು ನೆನಪು ಮಾಡಬೇಕಲ್ಲವೆ. ಹೇಗೆ ದತ್ತುಮಕ್ಕಳು ಆ ತಂದೆ-ತಾಯಿಯ ಮಡಿಲನ್ನು ತೆಗೆದುಕೊಳ್ಳುತ್ತಾರೆಂದರೆ ಅವರಿಗೆ ಗೊತ್ತಿರುತ್ತದೆ- ನಾನು ಮೊದಲು ಇಂತಹವರ ಮಗುವಾಗಿದ್ದೆನು, ಈಗ ಇಂತಹವರ ಮಗುವಾಗಿದ್ದೇನೆ. ಮೊದಲಿದ್ದ ತಂದೆ-ತಾಯಿಯಿಂದ ಮನಸ್ಸು ದೂರವಾಗುತ್ತದೆ ಮತ್ತು ಇವರೊಂದಿಗೆ ಜೋಡಿಸಲ್ಪಡುತ್ತದೆ. ನಾವು ಇಲ್ಲಿಯೂ ಸಹ ಹಾಗೆಯೇ ಹೇಳುತ್ತೇವೆ- ನಾವು ಶಿವತಂದೆಯ ದತ್ತು ಮಕ್ಕಳಾಗಿದ್ದೇವೆ ಅಂದಮೇಲೆ ಆ ಲೌಕಿಕ ತಂದೆಯನ್ನು ನೆನಪು ಮಾಡುವುದರಿಂದ ಲಾಭವೇನು? ಪ್ರಿಯಾತಿಪ್ರಿಯ ತಂದೆಯು ಇಷ್ಟು ದೊಡ್ಡ ಸಂಪತ್ತನ್ನು ಕೊಡುವವರಾಗಿದ್ದಾರೆ. ತಂದೆಯೂ ಸಹ ಪರಿಶ್ರಮಪಟ್ಟು ಮಕ್ಕಳನ್ನು ಯೋಗ್ಯರನ್ನಾಗಿ ಮಾಡುತ್ತಾರಲ್ಲವೆ. ಇಂತಹ ತಂದೆಯನ್ನು ನೀವು ಗಳಿಗೆ-ಗಳಿಗೆಯೂ ಮರೆತುಹೋಗುತ್ತೀರಿ. ಹಾಗೆ ನೋಡಿದರೆ ಮತ್ತೆಲ್ಲರೂ ನಿಮಗೆ ದುಃಖವನ್ನೇ

ಕೊಡುವವರಾಗಿದ್ದಾರೆ ಆದರೂ ಸಹ ಅವರನ್ನೇ ನೆನಪು ಮಾಡುತ್ತಾ ಇರುತ್ತೀರಿ ಮತ್ತು ತಂದೆಯಾದ ನನ್ನನ್ನು ಮರೆತುಹೋಗುತ್ತೀರಿ. ಭಲೆ ತಮ್ಮ ಮನೆಯಲ್ಲಿಯೇ ಇರಿ ಆದರೆ ತಂದೆಯನ್ನು ನೆನಪು ಮಾಡಿ, ಇದರಲ್ಲಿ ಪರಿಶ್ರಮಪಡಬೇಕು. ಕೇವಲ ನನ್ನವರಾಗಿಯೇ ಇರಿ. ನಿರಂತರ ನನ್ನನ್ನು ನೆನಪು ಮಾಡಿ ಮತ್ತು ಹೊಸಪ್ರಪಂಚವನ್ನು ನೆನಪು ಮಾಡಿ. ಇದೆಲ್ಲವೂ ಸ್ಮಶಾನವಾಗಲಿದೆ. ನೀವು ನನ್ನವರಾದಿರೆಂದರೆ ವಿಶ್ವದ ಮಾಲೀಕರಾದಿರಿ ಏಕೆಂದರೆ ನಿಮಗೆ ಗೊತ್ತಿದೆ, ನಾವು ತಂದೆಯವರಾಗಿದ್ದೇವೆ ಅಂದಮೇಲೆ ಭವಿಷ್ಯದಲ್ಲಿಯೂ ಸಹ ನಾವೇ ಸ್ವರ್ಗದ ಮಾಲೀಕರಾಗುತ್ತೇವೆ. ಹೀಗೆ ಖುಷಿಯ ನಶೆಯೇರಬೇಕು.

ಇದೂ ಸಹ ನಿಮಗೆ ಗೊತ್ತಿದೆ- ಇದು ಹಳೆಯ ಶರೀರವಾಗಿದೆ, ಕರ್ಮಭೋಗವನ್ನು ಭೋಗಿಸಬೇಕಾಗುತ್ತದೆ. ಈ ಮಮ್ಮಾ-ಬಾಬಾರವರೂ ಸಹ ಖುಷಿಯಿಂದ ಕರ್ಮಭೋಗವನ್ನು ಭೋಗಿಸುತ್ತಾರೆ. ನಂತರ 21 ಜನ್ಮಗಳ ಸುಖವು ಎಷ್ಟು ದೊಡ್ಡದಾಗಿದೆ. ಇದಂತೂ ಹಳೆಯ ಪಾದರಕ್ಷೆಯಾಗಿದೆ. ಕರ್ಮಭೋಗವನ್ನು ಭೋಗಿಸುತ್ತಿರುತ್ತೀರಿ ನಂತರ 21 ಜನ್ಮಗಳಿಗಾಗಿ ಇದರಿಂದ ಮುಕ್ತರಾಗುತ್ತೀರಿ. ಯಾರಾದರೂ ಖಾಯಿಲೆಯಿಂದ ಮುಕ್ತರಾದರೆ ಖುಷಿಯಾಗುತ್ತದೆಯಲ್ಲವೆ. ಯಾವುದೇ ಆಪತ್ತು ಬರುತ್ತದೆ ನಂತರ ಅದು ದೂರವಾಗುತ್ತದೆಯೆಂದರೆ ಖುಷಿಯಾಗುತ್ತದೆಯಲ್ಲವೆ. ನಿಮಗೂ ಸಹ ಗೊತ್ತಿದೆ- ಈಗ ಜನ್ಮ-ಜನ್ಮಾಂತರಕ್ಕಾಗಿ ಆಪತ್ತುಗಳು ಕಳೆಯುತ್ತವೆ. ಈಗ ನಾವು ತಂದೆಯ ಬಳಿ ಹೋಗುತ್ತೇವೆ. ಇದು ವಿಚಾರಸಾಗರ ಮಂಥನ ಮಾಡಿ ಅನೇಕ ವಿಚಾರಗಳನ್ನು ರಚಿಸುವುದಾಗಿದೆ. ತಂದೆಯು ಸಲಹೆಯನ್ನಂತೂ ಕೊಡುತ್ತಾರೆ- ಹೀಗೆ ತಮ್ಮೊಂದಿಗೆ ಮಾತನಾಡಿ. ನಾವು 84 ಜನ್ಮಗಳ ಚಕ್ರವನ್ನು ಪೂರ್ಣ ಮಾಡಿದೆವು, ಈಗ ತಂದೆಯ ಬಳಿ ಹೋಗುತ್ತೇವೆ ನಂತರ ತಂದೆಯ ಆಸ್ತಿಯನ್ನು ಪಡೆಯುತ್ತೇವೆ. ಈ ಸಮಯವು ಪರೋಕ್ಷ ಮತ್ತು ಪ್ರತ್ಯಕ್ಷವಾಗಿದೆ. ಹೇಗೆ ಮಮ್ಮಾರವರಿಗೆ ಯಾವುದೇ ಸಾಕ್ಷಾತ್ಕಾರವಾಗಲಿಲ್ಲ. ಬಾಬಾರವರಿಗಂತೂ ಆಯಿತು. ವಿನಾಶ ಮತ್ತು ಸ್ಥಾಪನೆಯ ಸಾಕ್ಷಾತ್ಕಾರವಾಯಿತು. ಇವರಿಗೆ ಚಾಚೂತಪ್ಪದೆ ಭವಿಷ್ಯದ ಸಾಕ್ಷಾತ್ಕಾರವಾಯಿತು ಆದರೆ ಮೊದಲು ನಾನು ಈ ವಿಷ್ಣುವಾಗುತ್ತೇನೆ ಎನ್ನುವುದು ಅರ್ಥವಾಗಲಿಲ್ಲ. ಇದು ನಂತರ ಅರ್ಥವಾಗುತ್ತಾ ಹೋಯಿತು- ನಾವು ಈ ವಿಕಾರಿ ಗೃಹಸ್ಥಧರ್ಮದಿಂದ ಈಗ ನಿರ್ವಿಕಾರಿ ಗೃಹಸ್ಥಧರ್ಮದಲ್ಲಿ ಹೋಗುತ್ತೇವೆ, ತತತ್ವಂ. ನೀವೂ ಸಹ ತಂದೆಯ ವಿದ್ಯೆಯಿಂದ ಈ ರೀತಿಯಾಗುತ್ತೀರಿ. ಸ್ಪರ್ಧೆ ಮಾಡಬೇಕು. ಗೀತೆಯಲ್ಲಿ ಮಮ್ಮಾರವರ ಮಹಿಮೆಯಿದೆ ಜಗದಂಬಾ ಎಂದು ಯಾರಿಗೆ ಹೇಳಲಾಗುತ್ತದೆ. ವಾಸ್ತವದಲ್ಲಿ ಮಾತಾಪಿತ ಯಾರೆಂಬುದನ್ನು ನೀವೀಗ ತಿಳಿದುಕೊಂಡಿದ್ದೀರಿ. ಮಾತಾಪಿತ ಎಂದು ಹೇಳಿದಾಗ ಜಗದಂಬಾರ ನೆನಪು ಬರುವುದಿಲ್ಲ. ಅವರಂತೂ ನಿರಾಕಾರನಾಗಿದ್ದಾರೆ ಇದು ನಿಮ್ಮ ಬುದ್ಧಿಯಲ್ಲಿದೆ. ತಂದೆಯಂತೂ ಪರಮಾತ್ಮನಾಗಿದ್ದಾರೆ, ಅವರು ನಿರಾಕಾರನಾಗಿದ್ದಾರೆ, ನಿರಾಕಾರ ತಂದೆಯಂತೂ ತಾಯಿಯಾಗಲು ಸಾಧ್ಯವಿಲ್ಲ. ತಂದೆಯು ನಿರಾಕಾರನಾಗಿದ್ದಾರೆ, ಅವಶ್ಯವಾಗಿ ಆಸ್ತಿಯನ್ನು ಕೊಡುತ್ತಾರೆ. ಇಲ್ಲಿ ತನ್ನ ಪರಿಚಯವನ್ನು ಕೊಡಲು ಬರಬೇಕಾಗುತ್ತದೆಯಲ್ಲವೆ ಆದ್ದರಿಂದ ಅವರಿಗೆ ಅವಶ್ಯವಾಗಿ ತಾಯಿ ಬೇಕು ಅಂದಾಗ ಈ ಬ್ರಹ್ಮ ದೊಡ್ಡ ತಾಯಿಯಾದರಲ್ಲವೆ. ನಿರಾಕಾರನು ತಾತನಾಗಿದ್ದಾರೆ, ಎಷ್ಟು ವಿಚಿತ್ರವಾದ ಜ್ಞಾನವಾಗಿದೆ. ತಂದೆಯು ತಿಳಿಸುತ್ತಾರೆ- ನಾನು ನಿಮಗೆ ಎಷ್ಟೊಂದು ಗುಹ್ಯರಹಸ್ಯವನ್ನು ತಿಳಿಸುತ್ತೇನೆ. ತಂದೆ-ತಾಯಿ ಯಾರಾಗಿದ್ದಾರೆಂಬುದು ಯಾರ ಬುದ್ಧಿಯಲ್ಲಿಯೂ ಕುಳಿತುಕೊಳ್ಳುವುದಿಲ್ಲ. ಅವರು ಕೃಷ್ಣನೆಂದು ತಿಳಿಯುತ್ತಾರೆ ಕೇವಲ ಈ ಅವಾಂತರವನ್ನು ಮಾಡಿಬಿಟ್ಟಿದ್ದಾರೆ. ಇದಕ್ಕೆ ಮೊಟ್ಟಮೊದಲನೆಯ ದೊಡ್ಡತಪ್ಪು ಎಂದು ಹೇಳಲಾಗುತ್ತದೆ. ಯಾವುದಾದರೂ ನಿಮಿತ್ತವಾಗಬೇಕಲ್ಲವೆ, ಯಾವ ತಪ್ಪಿನಿಂದ ಭಾರತ ಇಷ್ಟೊಂದು ದುಃಖಿಯಾಗುತ್ತದೆ. ಈಗ ನಿಮಗೆ ಗೊತ್ತಿದೆ- ಯಾರು ಮರೆಸಿದರು? ಮರೆಯಲು ಕಾರಣವೇನು? ಅವಶ್ಯವಾಗಿ ಮಾಯಾರಾವಣನು ವಿಮುಖರನ್ನಾಗಿ ಮಾಡಿದನು. ಹೇಗೆ ತಂದೆಯು ಮಾಡಿ-ಮಾಡಿಸುವವರಾಗಿದ್ದಾರೆಯೋ ಹಾಗೆಯೇ ಮಾಯೆಯೂ ಸಹ ಮಾಡಿ-ಮಾಡಿಸುವಂತಹ ದುಃಖದಾತನಾಗಿದೆ. ತಂದೆಯು ಮಾಡಿ-ಮಾಡಿಸುವಂತಹ ಸುಖದಾತನಾಗಿದ್ದಾರೆ ಹಾಗೂ ಮಾಯೆಯು ಮಾಡಿ-ಮಾಡಿಸುವಂತಹ ದುಃಖದಾತನಾಗಿದೆ. ಮಾಯೆಯು ತಂದೆಯಿಂದ ವಿಮುಖರನ್ನಾಗಿ ಮಾಡುತ್ತದೆ. ಈಗ ಸ್ವಯಂ ತಂದೆಯೇ ತಿಳಿಸುತ್ತಾರೆ- ಹೇ ಆತ್ಮರೇ, ನಿರಂತರ ತಂದೆಯಾದ ನನ್ನನ್ನು ನೆನಪು ಮಾಡಿ. ನೀವು ನನ್ನ ಮಕ್ಕಳಾಗಿದ್ದೀರಿ, ನನ್ನಿಂದ ಆಸ್ತಿಯನ್ನು ತೆಗೆದುಕೊಳ್ಳಬೇಕಾಗಿದೆ ಆದ್ದರಿಂದ ಕೇವಲ ನನ್ನನ್ನು ನೆನಪು ಮಾಡಿದರೆ ವಿಕರ್ಮ ವಿನಾಶವಾಗುತ್ತದೆ. ಬ್ರಹ್ಮಾರವರ ಮುಖಾಂತರ ಬೇಹದ್ದಿನ ತಂದೆಯ ಮತವು ಸಿಗುತ್ತದೆ. ಗುರುಬ್ರಹ್ಮಾ ಎಂದು ಹೇಳುತ್ತಾರಲ್ಲವೆ. ಇದಂತೂ ಭಕ್ತಿಮಾರ್ಗದ ಮಹಿಮೆಯಾಗಿದೆ. ಗುರುಬ್ರಹ್ಮಾ ಪ್ರಸಿದ್ಧವಾಗಿದ್ದಾರೆ ಮತ್ತೆ ಮನುಷ್ಯರು ಈಶ್ವರ ಸರ್ವವ್ಯಾಪಿ ಎಂದು ಹೇಳಿಬಿಡುತ್ತಾರೆ. ಮೊದಲು ನಾವೂ ಸಹ ಇವರು ಸರಿಯಾಗಿ ಹೇಳುತ್ತಾರೆಂದು ತಿಳಿದಿದ್ದೆವು. ಈಗ ಮಾಯೆಯು ಇವರಿಂದ ಈ ರೀತಿ ಹೇಳಿಸಿದೆ ಎಂದು ತಿಳಿಯುತ್ತೇವೆ. ಮಾಯೆಯು ಕೆಳಗೆ ಬೀಳಿಸುವುದಕ್ಕಾಗಿ ತಪ್ಪು ಮಾಡಿಸುತ್ತದೆ ಮತ್ತು ತಂದೆಯು ಮೇಲೆತ್ತಲು ತಪ್ಪನ್ನು ಸರಿಪಡಿಸುತ್ತಾರೆ. ತಂದೆಯು ತುಂಬಾ ಒಳ್ಳೆಯ ಅದೃಷ್ಟವನ್ನು ರೂಪಿಸುತ್ತಾರೆ. ಅಂತಹ ತಂದೆಯನ್ನು ನೆನಪು ಮಾಡಬೇಕಾಗಿದೆ- ಇದಂತೂ ಸಹಜವಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಮ್ಮನ್ನು ಮಾ||ಬೀಜರೂಪನೆಂದು ತಿಳಿದು ಕರ್ಮೇಂದ್ರಿಯಗಳನ್ನು ಸಂಕುಚಿತಗೊಳಿಸಿ ಶಾಂತಿಯಲ್ಲಿ ಕುಳಿತುಕೊಳ್ಳುವ ಅಭ್ಯಾಸ ಮಾಡಬೇಕಾಗಿದೆ. ವಿಚಾರಸಾಗರ ಮಂಥನ ಮಾಡಬೇಕು. ಖುಷಿಯಲ್ಲಿರಬೇಕು ಮತ್ತು ಖುಷಿ-ಖುಷಿಯಿಂದ ಹಳೆಯ ಕರ್ಮಭೋಗವನ್ನು ಸಮಾಪ್ತಿ ಮಾಡಬೇಕಾಗಿದೆ.

2. ನಾವು 84 ಜನ್ಮಗಳ ಚಕ್ರವನ್ನು ಪೂರ್ಣ ಮಾಡಿದೆವು, ಈಗ ತಂದೆಯ ಬಳಿ ಹೋಗುತ್ತೇವೆ... ಹೀಗೆ ತಮ್ಮೊಂದಿಗೆ ತಾವು ಮಾತನಾಡಿಕೊಳ್ಳಬೇಕಾಗಿದೆ.

ವರದಾನ: ಗೌರವ ಬೇಡುವ ಬದಲು ಸದಾ ಉನ್ನತ ಸ್ಥಿತಿಯಲ್ಲಿರುವಂತಹ ಸರ್ವ ಪೂಜ್ಯನೀಯ ಭವ

ಕೆಲವು ಮಕ್ಕಳು ಯೋಚಿಸುತ್ತಾರೆ ನಾವಂತೂ ಮುಂದೆ ಹೋಗುತ್ತಿದ್ದೇವೆ ಆದರೆ ಬೇರೆಯವರು ನಮ್ಮನ್ನು ಮುಂದುವರೆಯಲು ಗೌರವ ಕೊಡುವುದಿಲ್ಲ. ಆದರೆ ಗೌರವ ಬೇಡುವ ಬದಲು ಸ್ವಯಂನ ಗೌರವ ಸ್ವಯಂ ಇಟ್ಟುಕೊಳ್ಳಿ ಆಗ ಬೇರೆಯವರು ಸ್ವತಃ ಗೌರವ ಕೊಡುವರು. ತಮ್ಮ ಗೌರವ ಇಡುವುದು ಅರ್ಥಾತ್ ತಮ್ಮನ್ನು ಸದಾ ಮಹಾನ್ ಶ್ರೇಷ್ಠ ಆತ್ಮ ಎಂದು ಅನುಭವ ಮಾಡಿ. ಹೇಗೆ ಮೂರ್ತಿ ಯಾವಾಗ ಆಸನದಮೇಲಿರುವುದು ಆಗ ಪೂಜ್ಯನೀಯ ವಾಗಿರುವುದು ಅದೇ ರೀತಿ ನೀವೂ ಸಹಾ ಸದಾ ತಮ್ಮ ಉನ್ನತವಾದ ಸ್ಥಿತಿಯಲ್ಲಿ ಸ್ಥಿತರಾಗಿದ್ದಾಗ ಪೂಜ್ಯನೀಯರಾಗಿಬಿಡುವಿರಿ. ಎಲ್ಲರೂ ತಾವಾಗಿಯೇ ಗೌರವ ಕೊಡುತ್ತಾರೆ.

ಸ್ಲೋಗನ್: ಮಾಯೆಯನ್ನು ತಿರಸ್ಕಾರ ಮಾಡುವವರೇ ಸರ್ವರ ಸತ್ಕಾರಿಯಾಗುತ್ತಾರೆ.